MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.46 ENGLISH DAILY Subscription Yearly - Rs. - THURSDAY 16-12-2021

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ನವೆಂಬರ್ 1–15 ರ ತನಕ ಮಲೇಶ್ಯಾದ ಪಾಮೆಣ್ಣೆ ರಫ್ತು 9 ಶೇಕಡಾ ಇಳಿಕೆ

2021 ನವೆಂಬರ್ 1–15 ರ ತನಕ ಮಲೇಶ್ಯಾದ ಪಾಮೆಣ್ಣೆ ರಫ್ತು 2020 ರ ಇದೇ ಅವಧಿಗಿಂತ 9 ಶೇಕಡಾ ಇಳಿಕೆಯಾಗಿ 725,600 ಟನ್ ರಫ್ತಾಗಿದೆಯೆನ್ನಲಾಗಿದೆ. ಇದರಿಂದ ಬೇಡಿಕೆ ಇಳಿಕೆಯಿಂದ ಫ್ಯೂಚರ್ ದರ ಹಿಂದಿನ ಎರಡೂವರೆ ತಿಂಗಳಲ್ಲಿ ಕನಿಷ್ಠ ಮಟ್ಟಕ್ಕೇಳಿದಿದೆಯೆನ್ನಲಾಗಿದೆ. ಸಾಸಿವೆ ದಾಖಲೆ ಉತ್ಪಾದನೆಯಿಂದ ಭಾರತದ ಸಸ್ಯಜನ್ಯ ತೈಲ ಆಮದು ಇಳಿಕೆಯಾಗಲಿದೆಯೆನ್ನಲಾಗಿದೆ. ಇಂದಿನ ಮಲೇಶ್ಯನ್ ಪಾಮೆಣ್ಣೆ ಫ್ಯೂಚರ್ ದರ ಗಳಿಕೆ ಕಂಡಿದೆ. ಸೋಯ ಫ್ಯೂಚರ್ ದರವೂ ಹೆಚ್ಚಳವಾಗಿದೆ.

## ಶ್ರೀಲಂಕಾ ಮೂಲಕ ಕಾಳುಮೆಣಸು ಆಮದು ಹೆಚ್ಚಳ, ದರ ಹೆಚ್ಚಳಕ್ಕೆ ತಡೆ

ಶ್ರೀಲಂಕಾದಿಂದ ಭಾರತಕ್ಕೆ ಕಾಳುಮೆಣಸು ಆಮದು ಹೆಚ್ಚಳವಾಗುತ್ತಿರುವುದರಿಂದ ದರ ಹೆಚ್ಚಳಕ್ಕೆ ತಡೆಯಾಗಿದೆಯೆನ್ನಲಾಗಿದೆ. ಏರುಗತಿಯಲ್ಲಿದ್ದ ದೇಶೀ ಕಾಳುಮೆಣಸು ದರ ಹೆಚ್ಚಳಕ್ಕೆ ತಡೆಯಾಗಿದೆ. SAFTA ಮೂಲಕ ನವೆಂಬರ್ ತಿಂಗಳಲ್ಲಿ ಶ್ರೀಲಂಕಾದಿಂದ 1814 ಟನ್ ಕಾಳು ಮೆಣಸು ಆಮದಾಗಿದೆಯೆನ್ನಲಾಗಿದೆ. 2021 ಜನವರಿಯಿಂದ ನವೆಂಬರ್ ತನಕ ಶ್ರೀಲಂಕಾದಿಂದ 8961 ಟನ್ ; ಅಂದರೆ ಹಿಂದಿನ ವರ್ಷದ ಇದೇ ಅವಧಿಯಲ್ಲಾಗಿದ್ದ 4017 ಟನ್ ಗಳ ದುಪ್ಪಟ್ಟುಗಿಂತ ಹೆಚ್ಚು ಕಾಳುಮೆಂಸು ಭಾರತಕ್ಕೆ ಆಮದಾಗಿದೆಯೆನ್ನಲಾಗಿದೆ.

## 2021 ರಲ್ಲಿ ವಿಯೆಟ್ನಾಂ ನ ಗೋಡಂಬಿ ರಫ್ತು 13 ಶೇಕಡಾ ವೃದ್ಧಿ

2021 ರಲ್ಲಿ ಇದುವರೆಗೆ ವಿಯೆಟ್ನಾಂ ನ ಗೋಡಂಬಿ ರಫ್ತು ಗಾತ್ರದಲ್ಲಿ 13 ಶೇಕಡಾ ವೃದ್ಧಿಯಾಗಿ 577400 ಟನ್ ಗಳಿಗೇರಿದ್ದು ಮೌಲ್ಯ 12 ಶೇಕಡಾ ಹೆಚ್ಚಳವಾಗಿ, 3.63 ಬಿಲಿಯನ್ ಡಾಲರ್ ಆಗಿದೆಯೆನ್ನಲಾಗಿದೆ. ಅಮೇರಿಕಾ ಅತಿ ದೊಡ್ಡ ಗ್ರಾಹಕನಾಗಿದ್ದು, ನಂತರ ಯುರೋಪ್ ಮತ್ತು ಚೀನಾಗಳು ಪ್ರಮುಖ ಗ್ರಾಹಕ ದೇಶಗಳಾಗಿವೆ. ಜರ್ಮನಿಗೂ ರಫ್ತು ಪ್ರಾರಂಭವಾಗುತ್ತಿದ್ದು ವ್ಯವಹಾರ ವೃದ್ಧಿಯಾಗುತ್ತಿದೆಯೆನ್ನಲಾಗಿದೆ.